




# ಅಂತರ್ಜಾಲದಲ್ಲಿ ಬಾಬಾ ಸಾಹೇಬರ ಅರಿವಿನ ದಾರಿ

ಅಂತರ್ಜಾಲದಲ್ಲಿ ಕನ್ನಡ ಭಾಷೆಯಲ್ಲಿ ಬಾಬಾ ಸಾಹೇಬ ಅಂಬೇಡ್ಕರರ ವಿಚಾರಗಳನ್ನು ನೇರವಾಗಿ ಜನರಿಗೆ ತಲುಪಿಸುವ ಉದ್ದೇಶದಿಂದ ರೂಪುಗೊಂಡಿದ್ದು 'ಅಂಬೇಡ್ಕರ್ ಓದು' ಸರಣಿ. ಕರ್ನಾಟಕದ ಎಲ್ಲ ಭಾಗದ, ಎಲ್ಲ ವರ್ಗದ ಜನರನ್ನೂ ಒಳಗೊಂಡು ಹರಿಯುತ್ತಿರುವ ಈ ಅರಿವಿನ ನದಿ, ಇಂದು ನಮ್ಮೆಲ್ಲರ ಹೃದಯದಲ್ಲಿ ಒಸರಬೇಕಾದ ಅಮೃತವಾಹಿನಿಯೂ ಹೌದು.

■ ಪದ್ಮನಾಭ ಭಟ್

ಸ್ವತಂತ್ರ ಭಾರತಕ್ಕೆ ಬಲಿಷ್ಠವಾದ ವೈಚಾರಿಕ ನೆಲೆಗಟ್ಟನ್ನು ರೂಪಿಸಿದ ಅದಮ್ಯ ಚೇತನಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಪ್ರಮುಖರು. ಕಾಲ ಕಳೆದ ಹಾಗೆ ಅವರ ವಿಚಾರಗಳು ಹೆಚ್ಚು ಹೆಚ್ಚು ಪ್ರಸ್ತುತವಾಗುತ್ತ ಹೋಗುತ್ತಿರುವುದರ ಕುರಿತು ಸಂಭ್ರಮಿಸಬೇಕೋ, ಅವರ ಆಶಯಗಳು ಇನ್ನಷ್ಟು ದೂರಕ್ಕೆ ತಳ್ಳಲ್ಪಡುತ್ತಿರುವ ಬಗ್ಗೆ ವಿಷಾದಿಸಬೇಕೋ ಗೊತ್ತಾಗದ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಅವರ ಬದುಕನ್ನು, ಬರಹಗಳನ್ನು, ವೈಚಾರಿಕತೆಯನ್ನು ಕೆಲವೇ ಟೆಂಪ್ಲೇಟ್‌ಗಳಿಗೆ ಸೀಮಿತಗೊಳಿಸಿ ಪೂಜಿಸುವ ಅಥವಾ ದ್ವೇಷಿಸುವವರೇ ನಮ್ಮ ನಡುವೆ ಹೆಚ್ಚಿದ್ದಾರೆ. ಹಾಗಾಗಿ ಅಂಬೇಡ್ಕರ್ ಅವರ ವಿಚಾರಗಳನ್ನು ಅದರ ಎಲ್ಲ ಆಯಾಮಗಳೊಟ್ಟಿಗೆ ಜನರಿಗೆ ತಲುಪಿಸುವುದು ಇಂದಿನ ಕಾಲದ ತುರ್ತು ಅಗತ್ಯ. ಈ ಕೆಲಸದಲ್ಲಿ ಸದ್ದಿಲ್ಲದೆ ತೊಡಗಿಕೊಂಡಿದ್ದಾರೆ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ, ಕವಿ ಅರುಣ್ ಜೋಳದ ಕೂಡ್ಲಿಗಿ.

ಅಂಬೇಡ್ಕರ್ ಕುರಿತು ತಿಳಿದುಕೊಳ್ಳುವ ಆಸಕ್ತಿ ಇರುವವರಿಗೆ ಅಂತರ್ಜಾಲದಲ್ಲಿ ಅವರ ವಿಚಾರಗಳು ನೇರವಾಗಿ ಕನ್ನಡದಲ್ಲೇ ಸಿಗುವಂತಾಗಬೇಕು ಎಂಬ ಉದ್ದೇಶದಿಂದ ಅರುಣ್, ತಮ್ಮ ಯೂಟ್ಯೂಬ್ ಚಾನಲ್‌ನಲ್ಲಿ 'ಅಂಬೇಡ್ಕರ್ ಓದು' ಎಂಬ ಸರಣಿಯನ್ನು ನಡೆಸುತ್ತಿದ್ದಾರೆ. ಆ ಸರಣಿಯಲ್ಲಿ ಈಗ 102 ಗಂಟೆಗೂ ಅಧಿಕ ಅವಧಿಯ ಅಂಬೇಡ್ಕರ್ ವಿಚಾರಗಳ ಓದು ಲಭ್ಯವಿದೆ.

'ಝಿ ಕನ್ನಡ ವಾಹಿನಿಯಲ್ಲಿ ಅಂಬೇಡ್ಕರ್ ಅವರ ಜೀವನವನ್ನು ಆಧರಿಸಿದ 'ಮಹಾನಾಯಕ' ಧಾರಾವಾಹಿ ಪ್ರಾರಂಭವಾದಾಗ ಗೂಗಲ್ ಒಂದು ವರದಿ ನೀಡಿತು. ಅದರ ಪ್ರಕಾರ ಧಾರಾವಾಹಿ ಪ್ರಾರಂಭವಾದ ಎರಡನೇ ವಾರದಲ್ಲಿ ವಿಕಿಪಿಡಿಯಾದಲ್ಲಿ ಅಂಬೇಡ್ಕರ್ ಕುರಿತ ಮಾಹಿತಿಯನ್ನು ಹೆಚ್ಚು ಜನರು ಹುಡುಕುತ್ತಿದ್ದರು. ಅದು ನನಗೆ ಕುತೂಹಲಕಾರಿ ಅನಿಸಿತು. ಅಂಬೇಡ್ಕರ್ ಕುರಿತು ಗೂಗಲ್‌ನಲ್ಲಿ ಕನ್ನಡದ ಮಾಹಿತಿ ಏನಿದೆ ಎಂದು ನಾನೂ ಹುಡುಕಿನೋಡಿದೆ. ಕಣಜದಲ್ಲಿ 'ಅಂಬೇಡ್ಕರ್ ಸಂಪುಟ' ಸಿಗುತ್ತದೆ. ಆದರೆ ಅದರ ಕೆಲವು ಭಾಗಗಳು ಮೊಬೈಲ್‌ನಲ್ಲಿ ಓದಲು ಸಾಧ್ಯವಿಲ್ಲ. ಅದು ಬಿಟ್ಟರೆ ಅಂಬೇಡ್ಕರ್ ಕುರಿತು ಬೇರೆಯವರು ಮಾಡಿದ ಭಾಷಣಗಳಿದ್ದವು. ಆದರೆ ನೇರವಾಗಿ ಅಂಬೇಡ್ಕರ್ ಅವರ ವಿಚಾರವನ್ನು ತಿಳಿಸುವ ಆಡಿಯೊ, ವಿಡಿಯೊಗಳು ಏನೂ ಇರಲಿಲ್ಲ. ಅಂದರೆ ಅಂಬೇಡ್ಕರ್ ವಿಚಾರಗಳು ಕನ್ನಡದಲ್ಲಿ ನೇರವಾಗಿ ಸಿಗುತ್ತಿರಲಿಲ್ಲ. ಇಂಗ್ಲಿಷ್‌ನಲ್ಲಾದರೆ ಪುಸ್ತಕಗಳನ್ನು ಆಡಿಯೊ ರೂಪದಲ್ಲಿ ಓದಿ ಹೇಳುವ ಆ್ಯಪ್‌ಗಳಿವೆ. ಪ್ರಾದೇಶಿಕ ಭಾಷೆಗಳಲ್ಲಿ ಹಾಗೆ ಆಗುವುದಿಲ್ಲ. ಹಾಗಾಗಿ ಕನ್ನಡದಲ್ಲಿ ಅಂಬೇಡ್ಕರ್ ವಿಚಾರಗಳು ಎಲ್ಲರಿಗೂ ಸಿಗುವ ಹಾಗೆ ಏನಾದರೂ ಮಾಡಬೇಕು ಅನಿಸಿತು. ಇದೇ ಉದ್ದೇಶದಿಂದ 20 ಫೇಸ್‌ಬುಕ್ ಲೈವ್ ಮಾಡಿದೆ. ಅಲ್ಲಿ ಬೆಳಗಿನಿಂದ ಸಂಜೆಯವರೆಗೂ ನಲ್ವತ್ತು ಜನ ಅಂಬೇಡ್ಕರ್ ಬರಹಗಳನ್ನು ಓದಿದರು. ಇದು ಇಷ್ಟಕ್ಕೆ ನಿಲ್ಲಬಾರದು, ಒಂದಿಷ್ಟು ದಿನವಾದರೂ ನಿರಂತರವಾಗಿ ಮಾಡಿಕೊಂಡು ಹೋಗಬೇಕು ಅನಿಸಿತು' ಎಂದು 'ಅಂಬೇಡ್ಕರ್ ಓದು' ಸರಣಿಗೆ ಪ್ರೇರಕವಾದ ಸಂಗತಿಗಳನ್ನು ವಿವರಿಸುತ್ತಾರೆ ಅರುಣ್.

ಈ ಓದನ್ನು ಒಂದು ದಿನದ ಸಂಭ್ರಮಕ್ಕೆ ಸೀಮಿತಗೊಳಿಸುವುದು ಅವರಿಗೆ ಸುತ್ತರಾಂ ಇಷ್ಟವಿರಲಿಲ್ಲ. ಬಾಬಾ ಸಾಹೇಬರ ವಿಚಾರಗಳ ಜೊತೆಗೆ ನಿರಂತರವಾಗಿ ಒಡನಾಡುವ ಹಾಗೆ ಏನಾದರೂ ಮಾಡಬೇಕು ಎಂಬುದು ಅವರ ಆಲೋಚನೆಯಾಗಿತ್ತು. ಆದರೆ ಪೂರ್ಣಪ್ರಮಾಣದಲ್ಲಿ ಅದರಲ್ಲಿಯೇ ತೊಡಗಿಕೊಳ್ಳಲು ಸಾಧ್ಯವಿರಲಿಲ್ಲ. ಈ ಎಲ್ಲವನ್ನೂ ಮನಸಲ್ಲಿಟ್ಟುಕೊಂಡು ಅಂಬೇಡ್ಕರ್ ವಿಚಾರಗಳನ್ನು ನೇರವಾಗಿ ಹೇಳುವ ಆಡಿಯೊ ಆರ್ಕೈವ್ಸ್ ಮಾಡಲು ನಿರ್ಧರಿಸಿದರು. ಮೊದಲಿಗೆ ತಮ್ಮ ಆಲೋಚನೆಯ ಕುರಿತು ಒಂದು ಟಿಪ್ಪಣಿ ಮಾಡಿ ಮುನ್ನೂರು ಜನರಿಗೆ ಕಳಿಸಿದರು. ಅವರಲ್ಲಿ ಹತ್ತು ಹದಿನೈದು ಜನರಷ್ಟೇ ಸ್ಪಂದಿಸಿದ್ದು. ಆದರೂ ಬಿಡದೆ, ಫೋನ್‌ನಲ್ಲಿ ಸಂಪರ್ಕಿಸಿ ತಮ್ಮ ಪ್ರಯತ್ನದಲ್ಲಿ ಪಾಲ್ಗೊಳ್ಳುವಂತೆ ಕೇಳಿಕೊಂಡರು. ಅವರ ಪ್ರಯತ್ನಕ್ಕೆ ಸ್ಪಂದಿಸಿ ಮೊದಲು ಅಂಬೇಡ್ಕರ್ ಬರಹ ಓದಿ ಕಳಿಸಿದ್ದು ಸಾಹಿತಿ, ವೈದ್ಯೆ ಎಚ್.ಎಸ್. ಅನುಪಮಾ. ಅವರೇ ಈ ಸರಣಿಯ ಮೊದಲ ಓದುಗರು.

'ಆರಂಭದ ನೂರು ಎಪಿಸೋಡ್‌ಗಳಲ್ಲಿ ಅವರ ಇಷ್ಟದ ಪಠ್ಯವನ್ನು ಆಯ್ಕೆ ಮಾಡಿಕೊಳ್ಳಲು ಸ್ವಾತಂತ್ರ್ಯ ನೀಡಿದ್ದೆವು. ಪುನರಾವರ್ತನೆ ಹೆಚ್ಚಾಗತೊಡಗಿತು. ಅಲ್ಲದೆ ಕೆಲವೇ ವಿಷಯಗಳ ಕುರಿತ ಪಠ್ಯವನ್ನೇ ಹೆಚ್ಚಿನವರು ಆಯ್ದುಕೊಳ್ಳುತ್ತಿದ್ದರು. ನಂತರ ನಾವೇ ಪಠ್ಯ ಆಯ್ಕೆ ಮಾಡಿ ಸ್ಕ್ಯಾನ್ ಮಾಡಿ ಕಳಿಸತೊಡಗಿದೆವು. ಇದರಿಂದ ಅಂಬೇಡ್ಕರ್ ವಿಚಾರಗಳ ಬೇರೆ ಬೇರೆ ಆಯಾಮಗಳನ್ನು ಒಳಗೊಳ್ಳಲು ಸಾಧ್ಯವಾಯ್ತು. ಉದಾಹರಣೆಗೆ, ಕೃಷಿ, ವಿಜ್ಞಾನ, ರೈತರ ಬಗ್ಗೆ ಅಂಬೇಡ್ಕರ್ ಬರೆದಿದ್ದೆಲ್ಲ ಹೆಚ್ಚು



